ತುಂಡರಿಸಿ, ಒಂದು ಲಾಸ್ಟ್ ಸಿಗರೇಟು ಎಂದು ಅವಳನ್ನು ಮತ್ತೊಂದು ವಿಷಯಕ್ಕೆ ಹೊರಳಿಸುತ್ತಿದ್ದ. ಹೀಗೆ ಮಾಡುವಾಗೆಲ್ಲ ಅವನಿಗೆ ಇನ್ನೊಂದು ಬಗೆಯ ಸಂಕಟವಾಗಲು ಆರಂಭವಾಗುತ್ತಿತ್ತು.

ಅಂಜಲಿಯ ಬಗ್ಗೆ ಇಡೀ ಆಫೀಸಿನಲ್ಲಿ ಸಂಪೂರ್ಣವಾಗಿ ತಿಳಿದಿರುವುದೆಂದರೆ ಅದು ಅಭಿಜಿತನಿಗೆ ಮಾತ್ರ.

ನಾಲ್ಕು ವರ್ಷಗಳ ಹಿಂದೆ ಆಡ್‌ಬಾಕ್ಸ್ ಕಂಪನಿಗೆ ಮೂರು ವರ್ಷದ ಗಂಡು ಮಗು ಸುಹಾಸನೊಂದಿಗೆ ಅಂಜಲಿ ಕೆಲಸಕ್ಕೆಂದು ಸೇರಿಕೊಂಡಾಗ ಈ ಕಾರ್ಪೊರೇಟ್ ಜಗತ್ತಿನ ವಿಶೇಷವಾದ ಭಾಷೆಯ ಒಳಾರ್ಥಗಳನ್ನು ಅವಳಿಗೆ ಹಂತಹಂತವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಿದಂತೆ ಜಾಹೀರಾತು, ಮಾರುಕಟ್ಟೆ ವಿಚಿತ್ರ ಲೆಕ್ಕಾಚಾರ, ಕ್ಲೈಂಟ್, ಕಂಪನಿಗಳ ತಣ್ಣನೆಯ ಕೌರ್ಯ ಎಲ್ಲವನ್ನೂ ಅವಳೆದುರು ನೈಜವಾಗಿ ತೆರೆದುಕೊಳ್ಳಲು ಆರಂಭವಾಗಿತ್ತು.

'ನಿಮ್ಮ ವರ್ಕ್ ಇನ್ವಾಲ್ವ್‌ಮೆಂಟ್ ಇನ್ನೂ ಬೇಕು, ನಿಮ್ಮದೇ ಟೀಮ್‌ಮೇಟ್ಸ್ ಇದೆಲ್ಲ ನನಗೆ ಹೇಳಿದ್ದು, ಇನ್ನೂ ಹೇಳುವುದಕ್ಕೆ ಇದೆ ಬಟ್ ಕಮೆಂಟ್ಸ್ ಫಿಲ್ಟರ್ಡ್' ಎಂದು ಸಿಇಓ ಸಮರ್ಥ ತ್ರಿಪಾಠಿ ಹೇಳಿದಾಗ ಅಂಜಲಿಗೆ ಈ ಕಾರ್ಪೊರೇಟ್ ಜಗತ್ತಿನ ಭಾಷೆಯಲ್ಲಿ ಕಮೆಂಟ್ಸ್ ಫಿಲ್ಟರ್ಡ್ ಎಂದರೆ ಏನು ಎನ್ನುವುದು ಅರ್ಥವಾಗಲೇ ಇಲ್ಲ. ಇದೇ ಸಮಯಕ್ಕೆ ಇದುವರೆಗೂ ಎಲ್ಲರೊಂದಿಗೂ ನಗುನಗುತ್ತಲೇ ಆಫೀಸಿನ ಸಮಯದಲ್ಲಿ ಕಾಫಿ, ಟೀ ತಂದುಕೊಡುತ್ತಿದ್ದ ಹುಡುಗ ಬದಲಾಗಿದ್ದ. ಹೊಸದಾಗಿ ಬಂದಿದ್ದ ನೇಪಾಳಿ ಹುಡುಗನ ಮುಖ ಅಂಜಲಿಗೆ ಅಷ್ಟಾಗಿ ಪರಿಚಿತ ಎನಿಸದ ಕಾರಣ ಪಕ್ಕದಲ್ಲೇ ಕೂತಿದ್ದ ಸುಮಾಳಿಗೆ 'ನಮಗೆ ಟೀ ಕೊಡ್ತಾ ಇದ್ದ ಅಲ್ವಾ? ಆ ಹುಡುಗ ಎಲ್ಲಿ ಹೋದ? ಇವನು ಹೊಸಬನಾ?' ಎಂದು ಕೇಳಿದ್ದಳು.

'ಯಸ್, ಹೊಸ ಹುಡುಗ ಅಂತೆ, ಬೆಳಗ್ಗೆ ಸೆಕ್ಯೂರಿಟಿ ಹೇಳಿದ್ರು ಹಿಂದೆಯಿದ್ದ ಹುಡುಗ ನಿನ್ನೆ ನಾಗರಬಾವಿ ಸರ್ಕಲ್‌ನಲ್ಲಿ ಮನೆಗೆ ಹೋಗುವಾಗ ಆಕ್ಸಿಡೆಂಟಿನಲ್ಲಿ ಸತ್ತು ಹೋಗಿದ್ದಾನೆ. ವಿಷಯ ರಾತ್ರಿಯೇ ಗೊತ್ತಾಗಿದೆ. ತುಂಬಾ ಪ್ರಾಜೆಕ್ಟ್ಸ್ ನಡೀತಾ ಇದೆ ಅಲ್ವಾ? ಈಗ ಟೀ, ಕಾಫಿ ಕುಡಿಯುವವರು ಜಾಸ್ತಿ ಆಫೀಸಿನಲ್ಲಿ ಅಂಡ್ ಕ್ರಿಯೇಟಿವ್ ಪೀಪಲ್ ನೀಡ್ ಸ್ಪೇಸ್ ಇನ್ ಮೈಂಡ್. ಅದಕ್ಕೆ ಬೆಳಗ್ಗೆಯೇ ಇವನನ್ನು ಹುಡುಕಿ ಕೆಲಸಕ್ಕೆ ತಂದಿದ್ದಾರೆ' ಎಂದು ಉತ್ತರಿಸಿ ಸುಮ್ಮನಾದಳು ಸುಮಾ. ನೇಪಾಳಿ ಹುಡುಗ ತಂದಿಟ್ಟಿದ್ದ ಬಿಸಿಯಾದ ಕಾಫಿಯನ್ನು ಮುಟ್ಟುವುದಕ್ಕೂ ಗಾಬರಿಗೊಂಡವಳಂತೆ ಅಂಜಲಿ ಕೂತುಬಿಟ್ಟಳು.

ಒಬ್ಬರ ಒಳಗಿನ ಮಾತು ಸಂಪೂರ್ಣವಾಗಿ ಮುಟ್ಟದ ಹಾಗೂ ಜೊತೆಯಲ್ಲೇ ಇಷ್ಟು ದಿನ ಇದ್ದವರ ಸಾವು ನಮ್ಮನ್ನು ತಟ್ಟದ ಯಾವುದೋ ಅನೂಹ್ಯ ಜಗತ್ತಿನ ಜೇಡರ ಬಲೆಯಲ್ಲಿ ಸಿಕ್ಕಿಕೊಂಡ ಹುಳವೊಂದು ಒದ್ದಾಡುವಂತೆ ಅವಳಿಗೆ ಅವಳೇ ತೋರಿದಳು. ಹೊಸ ಐಡಿಯಾ, ಪ್ಲಾನ್, ರೆವೆನ್ಯೂ ಈ ಬಗೆಯ ಮಾತುಗಳಿಂದಲೇ ತುಂಬಿಹೋಗಿದ್ದ ಆಫೀಸು ಎಲ್ಲರನ್ನೂ ಎಲ್ಲವನ್ನೂ ಮಾರಾಟಕ್ಕೆ ಬೀದಿಯಲ್ಲಿ ನಿಲ್ಲಿಸಿದಂತೆ ಭಾಸವಾಗತೊಡಗಿತು.

ಅಷ್ಟೊತ್ತಿಗಾಗಲೇ ಅಂಜಲಿಯನ್ನು ಮದುವೆಯಾಗುವುದಾಗಿ ಹೇಳುತ್ತಲೇ ಅವಳ ಒಂದು ಮಾತಿಗಾಗಿ ಕಾಯುತ್ತಿದ್ದ ಅಭಿಜಿತ ಅದೇ ಸಂಜೆ ಸಿಗರೇಟು ಸೇದುತ್ತಾ ಒಂದು ಸಣ್ಣ ಸಲುಗೆಯಲ್ಲಿ ಬೆಂಗಳೂರಿನಂತ ನಗರಗಳು ವೇಗವಾಗಿರುವುದು ಇದೇ ಕಾರಣಕ್ಕೆ ಎಂದು ಹೇಳತ್ತಾ ಅವಳನ್ನು ಸಹಜ ಸ್ಥಿತಿಗೆ ತರುವುದಕ್ಕೆ ಪ್ರಯತ್ನಿಸಿದ. ಆದರೆ ಅಂಜಲಿಗೆ ಆ ಯಾವ ಮಾತುಗಳು ಬೇಕಾಗಿರಲಿಲ್ಲ. ಅಭಿಜಿತನಿಗೆ ಒಂದೇ ಒಂದು ಮಾತನ್ನೂ ಹೇಳದೆ ಸೀದಾ ಆಟೋ ಹಿಡಿದು ಮನೆಗೆ ಹೊರಬಿಟ್ಟಳು. ಅವನ ಬಾಯಿಂದ ಸಿಗರೇಟಿನ ಹೊಗೆ ಬರುತ್ತಲೇ ಇತ್ತು.

* * *

ಸುಹಾಸ ಒಬ್ಬನೇ ಮನೆಯಲ್ಲಿ ಟಿ.ವಿ ಎದುರು ಕುಳಿತಿದ್ದನು. ಬಂದವಳೇ ಅವನನ್ನು ತೊಡೆಯ ಮೇಲೆ ಕೂರಿಸಿಕೊಂಡು ಒಂದಕ್ಕೊಂದು ಸಂಬಂಧವಿಲ್ಲದ ಮಾತುಗಳನ್ನು ಅವನೆದುರು ಹೇಳುತ್ತಾ ಹೋದಳು. ಏಳು ವರ್ಷದ ಸುಹಾಸನಿಗೆ ಏನೊಂದು ಅರ್ಥವಾಗದೇ ಅಮ್ಮನ ಎದುರು ಮಿಕಿಮಿಕಿ ಕಣ್ಣು ಬಿಡುತ್ತಿದ್ದ. ಅಂಜಲಿಗೆ ಇನ್ನೇನೋ ಹೊಳೆದಂತಾಗಿ ಸುಹಾಸನಿಗೆ ತಾನೇ ಮುಖ ತೊಳೆಸಿ, ಬಟ್ಟೆ ಬದಲಿಸಿ ಹೊರಗೆ ಕರೆದುಕೊಂಡು ಹೋದಳು. ಅಂಗಡಿ ಬೀದಿಗಳಲ್ಲಿ ಅವನು ಕೇಳಿದ ಎಲ್ಲವನ್ನೂ ಕೊಡಿಸುತ್ತಾ